<u>ಸಾಕ್ಷಿಯನ್ನು ದಿನಾಂಕ 19-01-2024 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು</u>.

<u>ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಎಸ್.ಎನ್.ಬಿ. ವಕೀಲರಿಂದಃ</u>

ನೀವು ಮತ್ತು ನಿಮ್ಮ ಗಂಡ ಬಕ್ಕಪ್ಪ ಇಬ್ಬರು ಸೇರಿ ದಾವಾ ಸ್ವತ್ತನ್ನು 3 ನೇ ಪ್ರತಿವಾದಿಗೆ ಯಾವಾಗ ವರ್ಗಾವಣೆ ಮಾಡಿದ್ದಿರಿ ಎಂಬ ಪ್ರಶ್ನೆಗೆ ಸಾಕ್ಷಿ ದಾವಾ ಸ್ವತ್ತನ್ನು ನಾನಾಗಲಿ ಅಥವಾ ನನ್ನ ಗಂಡನಾಗಲಿ 3 ನೇ ಪ್ರತಿವಾದಿಗೆ ವರ್ಗಾವಣೆ ಮಾಡಿಲ್ಲ ಎನ್ನುತ್ತಾರೆ. ನನ್ನ ಗಂಡ 3 ನೇ ಪ್ರತಿವಾದಿ ಹೆಸರಿಗೆ ದಾವಾ ಹೊಲದ ಖಾತೆ ಬದಲಾವಣೆ ಮಾಡಲು ಅರ್ಜಿ ಕೊಟ್ಟ ನಂತರ ಅದಕ್ಕೆ ಸಂಬಂಧ ಪಟ್ಟ ಸಾರ್ವಜನಿಕ ನೋಟಿಸಿಗೆ ನೀವೆನಾದರೂ ತಕರಾರು ಕೊಟ್ಟಿದ್ದಿರಾ ಎಂಬ ಪ್ರಶ್ನೆಗೆ ಸಾಕ್ಷಿ ಯಾವುದೇ ನೋಟಿಸು ಬಂದಿಲ್ಲ ಎನ್ನುತ್ತಾರೆ. ನಾನು ಮತ್ತು ನನ್ನ ಗಂಡ ಇಬ್ಬರು ಸೇರಿ ದಾವಾ ಸ್ವತ್ತಿನ ಖಾತೆಯನ್ನು ಕಂದಾಯ ಅಧಿಕಾರಿಗಳ ಮೂಲಕ 3 ನೇ ಪ್ರತಿವಾದಿ ಹೆಸರಿಗೆ ಖುದ್ದಾಗಿ ಮಾಡಿಸಿದ್ದೆವು ಎನ್ನುವುದು ಸರಿಯಲ್ಲ.

ದಾವಾ ಸ್ವತ್ತಿಗೆ ಸಂಬಂಧಪಟ್ಟ ದಾಖಲೆಗಳೆಲ್ಲವು 1999 ನೆ ಇಸವಿಯಿಂದ ಇಲ್ಲಿಯವರೆಗೆ 3 ನೇ ಪ್ರತಿವಾದಿಯ ಹೆಸರಿಗೆ ಇದ್ದು ಆತನೇ 1999 ರಿಂದ ಇಲ್ಲಿಯವರೆಗೆ ಮಾಲೀಕನಾಗಿ ಸ್ವಾಧೀನದಲ್ಲಿ ಇದ್ದಾನೆ ಎನ್ನುವುದು ಸರಿಯಲ್ಲ. 1999 ರಿಂದ ಇಲ್ಲಿಯವರೆಗೆ ದಾವಾ ಸ್ವತ್ತಿಗೆ ಸಂಬಂಧಪಟ್ಟ ದಾಖಲೆಗಳನ್ನು ನೋಡಿದ್ದಿರಾ ಎಂಬ ಪ್ರಶ್ನೆಗೆ ಸಾಕ್ಷಿ ನಾನು ದಾಖಲೆಗಳನ್ನು ನೋಡಿದರು ನನಗೆ ಅರ್ಥವಾಗುವುದಿಲ್ಲ ಎನ್ನುತ್ತಾರೆ. ಈ ದಾವೆಯಲ್ಲಿ ನಾನು ಹಾಜರುಪಡಿಸಿರುವ ದಾಖಲೆಯಲ್ಲಿ ಏನು ಬರೆದಿದೆ ಎಂದು ತಿಳಿದುಕೊಳ್ಳಲು ನಾನು ಸದರಿ ದಾಖಲೆಯನ್ನು ಯಾರಿಂದಲೂ ಓದಿಸಿಲ್ಲ. ಸದರಿ ದಾಖಲೆಗಳನ್ನು ನಿಮ್ಮ ಮಗನ ಕೈಯಲ್ಲಿ ಓದಿಸಿದ್ದಿರಾ ಎಂಬ ಪ್ರಶ್ನೆಗೆ ಸಾಕ್ಷಿ ದಾಖಲೆಗಳು ಈಗಲೂ ನನ್ನ ಗಂಡನ ಹೆಸರಿಗೆ ಇದೆ ಎನ್ನುತ್ತಾರೆ. ನನ್ನ ಗಂಡನ ಹೆಸರಿಗೆ ಇದೆ ಎಂದು ನಾನು ಹೇಳುತ್ತಿರುವ ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ. ದಾವಾ ಸ್ವತ್ತು ನನ್ನದಲ್ಲ ಮತ್ತು ಅದು 3 ನೇ ಪ್ರತಿವಾದಿಗೆ ಸೇರಿದ್ದು ಎಂದು ನನಗೆ ಗೊತ್ತಿರುವುದರಿಂದಲೆ ನಾನು ಯಾವುದೇ ದಾಖಲೆ ಕೊಟ್ಟಿಲ್ಲ ಎನ್ನುವುದು ಸರಿಯಲ್ಲ.

ನನ್ನ ಗಂಡ ತೀರಿಕೊಂಡು ಈಗ 10-12 ವರ್ಷ ಆಯಿತು. ನನ್ನ ಮಗನಿಗೆ ಈಗ ಎಷ್ಟು ವರ್ಷ ಎಂದು ನನಗೆ ಗೊತ್ತಿಲ್ಲ. ನನ್ನ ಗಂಡ ತೀರಿಕೊಳ್ಳುವ 10-12 ವರ್ಷಗಳ ಹಿಂದಿನಿಂದಲೂ ದಾವಾ

ಸ್ವತ್ತಿನ ದಾಖಲೆಗಳು 3 ನೇ ಪ್ರತಿವಾದಿಯ ಹೆಸರಿಗೆ ಇದ್ದವು ಎನ್ನುವುದು ಸರಿಯಲ್ಲ. ನಿಮ್ಮ ಗಂಡ ತೀರಿಕೊಂಡ ಎಷ್ಟು ವರ್ಷಗಳ ನಂತರ ಈ ದಾವೆ ಸಲ್ಲಿಸಿದ್ದಿರಾ ಎಂಬ ಪ್ರಶ್ನೆಗೆ ಸಾಕ್ಷಿ ಒಂದು ವರ್ಷದ ನಂತರ ಸಲ್ಲಿಸಿದ್ದೇನೆ ಎನ್ನುತ್ತಾರೆ. ನಾನು ಈ ದಾವೆ ದಾಖಲಿಸಿ ಕೇವಲ 4 ವರ್ಷ ಆಗಿದೆ ಎಂದು ಸೂಚಿಸಿದರೆ ಸಾಕ್ಷಿ ನನಗೆ ಗೊತ್ತಾಗುವುದಿಲ್ಲ ಎನ್ನುತ್ತಾರೆ. ನನ್ನ ಗಂಡ ತೀರಿಕೊಳ್ಳುವಾಗ ನನ್ನ ಮಗ ದೊಡ್ಡವನಿದ್ದ ಎಂದರೆ ಸರಿ. ಈ ದಾವೆ ದಾಖಲಿಸುವಾಗ ನನ್ನ ಮಗನಿಗೆ ಹೇಳಿದ್ದೇನೆ. ನನ್ನ ಗಂಡ ತೀರಿಕೊಂಡಾಗ ನನ್ನ ಮಗ ವಯಸ್ಕನಿದ್ದರು ಸಹ ಆತ ದಾವೆ ಹಾಕಿಲ್ಲ ಎಂದರೆ ಸರಿ.

ದಾವಾ ಆಸ್ತಿಗಳಿಗೆ ಸಂಬಂಧಪಟ್ಟಂತೆ 2002-2003 ರವರೆಗಿನ ದಾಖಲೆಗಳನ್ನು ಮಾತ್ರ ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ ಅಲ್ಲಿಂದ ಮುಂದಿನ ವರ್ಷಗಳ ದಾಖಲೆಗಳನ್ನು ಸಲ್ಲಿಸಿಲ್ಲ ಎಂದು ಸೂಚಿಸಿದರೆ ಸಾಕ್ಷಿ ನನಗೆ ಅದೆಲ್ಲ ಅರ್ಥವಾಗುವುದಿಲ್ಲ ಎನ್ನುತ್ತಾರೆ. ನಾನು ಯಾವ ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ ಎಂದು ನನಗೆ ಗೊತ್ತಾಗುವುದಿಲ್ಲ.

ನಾನು ಪ್ರತಿವಾದಿಯರೊಂದಿಗೆ ಅನ್ಯೋನ್ಯವಾಗಿ ಇದ್ದೆ ಆದರೆ 2017 ನೇ ಇಸವಿಯಲ್ಲಿ ಹಣದ ಆಸೆ ಪಟ್ಟು ಈ ಸುಳ್ಳು ದಾವೆ ಸಲ್ಲಿಸಿದ್ದೇನೆ ಎನ್ನುವುದು ಸರಿಯಲ್ಲ. ದಾವಾ ಆಸ್ತಿಗೂ ನನಗೂ ಯಾವುದೇ ರೀತಿ ಸಂಬಂಧ ಇಲ್ಲ ಎನ್ನುವುದು ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು,**
**ಚಿಂಚೋಳಿ**